Bapuji Educational Association (Regd.)

# R.L. Law College, Davangere-02.

## ONE-DAY LEGAL AWARENESS/AID PROGRAMME ON 23/08/2023

On August 23, 2023, the R.L. Law College, Davanagere organised one-day legal awareness and assistance/aid program in associaction with the SS Care Trust, the District Legal Services Authority, the District Advocates Association, the Gram Panchayat Kakkargolla, and local associations. Hon. Smt. Prabha Mallikarjun, a life trustee for the S.S. Care Trust, Davangere and member of the Bapuji Educational Association's governing board, officially inaugurated the program. Shri. KG Basavana Gowdru, a former member of the Kakkargolla Zilla Panchayat Constituency in Davanagere, presided over the event. Hon. Mahaveer M. Karannanavar, Member Secretary, District Legal Services Authority, Davangere, served as the program's chief guest. Former Vice-Chancellor of Bangalore University, Prof. Dr. K. Siddappa, Dr. GS Yatheesh Principal, R.L. Law College, Davangere, were present.

Later, from 3:00 to 4:30 PM, college students organized a cultural program. At 5:00 pm, a ceremony to conclude this program was planned. The chief guests of this closing ceremony were Hon. Mrs. Rajeshwari N. Hegade, District Principal and Sessions Judge of Davangere, along with Shri. L. H. Arun Kumar, President, District Bar Association of Davangere, and Shri. Manjunath B. Legal Officer, Office of the District Superintendent of Police of Davangere. Mrs. Kotramma, President of the Gram Panchayat Kakkargolla, Davangere, and Dr. G. S. Yatheesh, Principal of the R.L. Law College. All of the members of the Kakkargolla Gram Panchayat, the villagers, and college students were there, as well as Mr. Gutyappa S., Vice President.

Honoring the prominent guests who were present on stage brought the event to a close. The people then petitioned the dignitaries on several legal matters and community troubles. The dignitaries were told to apply in writing to the District Legal Service Authority in this regard. In this manner, the program was successfully completed with the aid of free legal education and assistance for college students.

.

ಬಾಪೂಜಿ ವಿದ್ಯಾಸಂಸ್ಥೆ (ರಿ.)

ಆರ್.ಎಲ್. ಕಾನೂನು ಕಾಲೇಜು, ದಾವಣಗೆರೆ.

ಎಸ್.ಎಸ್. ಕೇರ್ ಟ್ರಸ್ಟ್, ದಾವಣಗೆರೆ,

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ,

ಜಿಲ್ಲಾ ವಕೀಲರ ಸಂಘ, ದಾವಣಗೆರೆ,

ಗ್ರಾಮ ಪಂಚಾಯಿತಿ ಕಕ್ಕರಗೊಳ್ಳ, ದಾವಣಗೆರೆ ಹಾಗೂ

ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ

**ಒಂದು ದಿನದ ಕಾನೂನು ಅರಿವು–ನೆರವು ಕಾರ್ಯಕ್ರಮ**

## ಆಹ್ವಾನ ಪತ್ರಿಕೆ

ದಿನಾಂಕ : 23.08.2023 ಬುಧವಾರ ಸಮಯ : ಬೆಳಗ್ಗೆ 11.00 ಕ್ಕೆ

ಸ್ಥಳ : ಬಿಷಫ್ನೇಶ್ವರ ಸಮುದಾಯ ಭವನ, ಕಕ್ಕರಗೊಳ್ಳ.

ತೆರೆದ–ಅಂಚೆ

ಗೆ,

ಶ್ರೀಮತಿ/ಶ್ರೀ ................................................

................................................

................................................

Page1

ಬಾಪೂಜಿ ವಿದ್ಯಾಸಂಸ್ಥೆ (ರಿ.)

ಆರ್.ಎಲ್. ಕಾನೂನು ಕಾಲೇಜು, ದಾವಣಗೆರೆ.

ಎಸ್.ಎಸ್. ಕೇರ್ ಟ್ರಸ್ಟ್, ದಾವಣಗೆರೆ,

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ,

ಜಿಲ್ಲಾ ವಕೀಲರ ಸಂಘ, ದಾವಣಗೆರೆ,

ಗ್ರಾಮ ಪಂಚಾಯಿತಿ ಕಕ್ಕರಗೊಳ್ಳ, ದಾವಣಗೆರೆ ಹಾಗೂ

ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ

**ಒಂದು ದಿನದ ಕಾನೂನು ಅರಿವು–ನೆರವು ಕಾರ್ಯಕ್ರಮ**

**ಉದ್ಘಾಟನಾ ಸಮಾರಂಭ ಬೆಳಗ್ಗೆ 11.00 ಗಂಟೆ**

**ಉದ್ಘಾಟನೆ** : **ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್**
ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು
ಹಾಗೂ ಲೈಫ್ ಟ್ರಸ್ಟಿ, ಎಸ್.ಎಸ್. ಕೇರ್ ಟ್ರಸ್ಟ್ ದಾವಣಗೆರೆ.

**ಮುಖ್ಯ ಅತಿಥಿಗಳು** : **ಗೌರವಾನ್ವಿತ ಮಹಾವೀರ್ ಎಂ. ಕರಣ್ಣನವರ್**
ಹಿರಿಯ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ.

: **ಪ್ರೊ. ಡಾ. ಕೆ. ಸಿದ್ದಪ್ಪ**
ವಿಶ್ರಾಂತ ಉಪಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ

: **ಡಾ. ಜಿ.ಎಸ್. ಯತೀಶ್**
ಪ್ರಾಂಶುಪಾಲರು,
ಆರ್.ಎಲ್. ಕಾನೂನು ಕಾಲೇಜು, ದಾವಣಗೆರೆ.

**ಅಧ್ಯಕ್ಷತೆ** : **ಶ್ರೀ ಕೆ.ಜಿ. ಬಸವನ ಗೌಡ್ರು**
ಮಾಜಿ ಸದಸ್ಯರು, ಕಕ್ಕರಗೊಳ್ಳ ಜಿಲ್ಲಾ ಪಂಚಾಯತ್ ಕ್ಷೇತ್ರ,
ದಾವಣಗೆರೆ.

ಸಾಂಸ್ಕೃತಿಕ ಕಾರ್ಯಕ್ರಮಗಳು ಕಿರುನಾಟಕ

ಸರ್ವರಿಗೂ ಸುಸ್ವಾಗತ

ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ, ಆರ್.ಎಲ್. ಕಾನೂನು ಕಾಲೇಜು,
ದಾವಣಗೆರೆ. ಹಾಗೂ
ಕಕ್ಕರಗೊಳ್ಳ ಗ್ರಾಮದ ಗ್ರಾಮಸ್ಥರು

Page2

ಬಾಪೂಜಿ ವಿದ್ಯಾಸಂಸ್ಥೆ (ರಿ.)

ಆರ್.ಎಲ್. ಕಾನೂನು ಕಾಲೇಜು, ದಾವಣಗೆರೆ.

ಎಸ್.ಎಸ್. ಕೇರ್ ಟ್ರಸ್ಟ್, ದಾವಣಗೆರೆ,

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ,

ಜಿಲ್ಲಾ ವಕೀಲರ ಸಂಘ, ದಾವಣಗೆರೆ,

ಗ್ರಾಮ ಪಂಚಾಯಿತಿ ಕಕ್ಕರಗೊಳ್ಳ, ದಾವಣಗೆರೆ ಹಾಗೂ

ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ

**ಒಂದು ದಿನದ ಕಾನೂನು ಅರಿವು–ನೆರವು ಕಾರ್ಯಕ್ರಮ**

**ಸಮಾರೋಪ ಸಮಾರಂಭ ಸಂಜೆ 5.00 ಗಂಟೆಗೆ**

**ಮುಖ್ಯ ಅತಿಥಿಗಳು** : **ಗೌರವಾನ್ವಿತ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ**
ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**ಅತಿಥಿಗಳು** : **ಗೌರವಾನ್ವಿತ ಮಹಾವೀರ್ ಎಂ. ಕರಣ್ಣನವರ್**
ಹಿರಿಯ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ.

: **ಶ್ರೀ ಎಲ್. ಎಚ್. ಅರುಣ್ ಕುಮಾರ್**
ಅಧ್ಯಕ್ಷರು, ಜಿಲ್ಲಾ ವಕೀಲರ ಸಂಘ ದಾವಣಗೆರೆ.

: **ಶ್ರೀ ಮಂಜುನಾಥ ಬಿ.**
ಕಾನೂನು ಅಧಿಕಾರಿ, ಜಿಲ್ಲಾ ಪೋಲಿಸ್
ವರಿಷ್ಠಾಧಿಕಾರಿಗಳ ಕಛೇರಿ, ದಾವಣಗೆರೆ.

: **ಡಾ. ಜಿ.ಎಸ್. ಯತೀಶ್**
ಪ್ರಾಂಶುಪಾಲರು,
ಆರ್.ಎಲ್. ಕಾನೂನು ಕಾಲೇಜು, ದಾವಣಗೆರೆ.

**ಅಧ್ಯಕ್ಷತೆ** : **ಶ್ರೀಮತಿ ಕೊಟ್ರಮ್ಮ ಕೋಂ ವಿರೇಶ್**
ಅಧ್ಯಕ್ಷರು, ಗ್ರಾಮ ಪಂಚಾಯಿತಿ ಕಕ್ಕರಗೊಳ್ಳ, ದಾವಣಗೆರೆ.

ಸಾಂಸ್ಕೃತಿಕ ಕಾರ್ಯಕ್ರಮಗಳು ಕಿರುನಾಟಕ

Page3

**ಉಪಸ್ಥಿತಿ**

| | |
|---|---|
| **ಶ್ರೀಮತಿ ಕೊಟ್ರಮ್ಮ ಕೋಂ ವಿರೇಶ್**<br>ಅಧ್ಯಕ್ಷರು,<br>ಗ್ರಾಮ ಪಂಚಾಯಿತಿ ಕಕ್ಕರಗೊಳ್ಳ,<br>ದಾವಣಗೆರೆ. | **ಶ್ರೀ. ಗುತ್ಯಪ್ಪ ಎಸ್.**<br>ಉಪಾಧ್ಯಕ್ಷರು,<br>ಗ್ರಾಮ ಪಂಚಾಯಿತಿ ಕಕ್ಕರಗೊಳ್ಳ,<br>ದಾವಣಗೆರೆ |

**ಗ್ರಾಮ ಪಂಚಾಯಿತಿ ಸದಸ್ಯರುಗಳು**

| | |
|---|---|
| ಶ್ರೀಮತಿ ಗಾಯಿತ್ರಿ ಟಿ. ಕೋಂ ವೆಂಕಟೇಶ್ | ಶ್ರೀ ಕೆ.ಎನ್. ನವೀನ್ ಕುಮಾರ್ |
| ಶ್ರೀಮತಿ ಸತ್ಯಮ್ಮ ಕೋಂ ಹನುಮಂತಪ್ಪ | ಶ್ರೀ ಸಾಧಿಕ್ ಎಸ್. |
| ಶ್ರೀಮತಿ ಕರಿಬಸಮ್ಮ ಕೋಂ ಪಕ್ಕೀರಪ್ಪ | ಶ್ರೀ ಕೆ.ಜಿ. ಮಹಾಂದಾತಪ್ಪ |
| ಶ್ರೀ. ಕರಿಬಸಪ್ಪ ಎಂ.ಎನ್. | ಶ್ರೀಮತಿ ಆಶಾ ಸಿ. ಕೋಂ ಸಿದ್ದೇಶ್ ಕೆ.ಆರ್. |
| ಶ್ರೀಮತಿ ರೇಣುಕಾ ಕೋಂ ಹನುಮಂತಪ್ಪ | ಶ್ರೀ ಪ್ರಸನ್ನ ಕುಮಾರ್ ವೈ.ಎಸ್. |
| ಕು. ಶಿವಗಂಗಮ್ಮ ಹೆಚ್.ಟಿ. ಬಿನ್ ತಿಪ್ಪಣ್ಣ | ಶ್ರೀ ಸುರೇಶ್ ಆರ್.ಬಿ. |
| ಶ್ರೀ ಚಂದನ್ ಕುಮಾರ್ ಜಿ.ಹೆಚ್. | ಶ್ರೀ ಬಿ.ಆರ್. ರಾಜಪ್ಪ |
| ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು | ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು |

**ವಿಶೇಷ ಆಹ್ವಾನಿತರು**

| | |
|---|---|
| ಶ್ರೀ ವೈ.ಆರ್. ಧನ್ಯಕುಮಾರ್<br>ಅಧ್ಯಕ್ಷರು, ಹಾಲು ಉತ್ಪಾದಕರ ಸಹಕಾರಿ ಸಂಘ,<br>ಕಕ್ಕರಗೊಳ್ಳ ಗ್ರಾಮ. | ಶ್ರೀ ಕೆ.ಎನ್. ನವೀನ್ ಕುಮಾರ್<br>ಉಪಾಧ್ಯಕ್ಷರು, ಹಾಲು ಉತ್ಪಾದಕರ ಸಹಕಾರಿ ಸಂಘ,<br>ಕಕ್ಕರಗೊಳ್ಳ ಗ್ರಾಮ. |
| ಶ್ರೀ ಆರ್. ಲಿಂಗಮೂರ್ತಿ<br>ಅಧ್ಯಕ್ಷರು, ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್<br>ನಿಯಮಿತ ಕಕ್ಕರಗೊಳ್ಳ ಗ್ರಾಮ. | ಶ್ರೀ ಕೆಂಚಪ್ಪ ಕಂಚಿಕೇರಿ<br>ಉಪಾಧ್ಯಕ್ಷರು, ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್<br>ನಿಯಮಿತ ಕಕ್ಕರಗೊಳ್ಳ ಗ್ರಾಮ. |
| ಶ್ರೀ ಹೆಚ್. ಪಾಲಾಕ್ಷಪ್ಪ<br>ಅಧ್ಯಕ್ಷರು, ಬಿಷಫ್ನೇಶ್ವರ ದೇವಸ್ಥಾನ ಸಮಿತಿ,<br>ಕಕ್ಕರಗೊಳ್ಳ ಗ್ರಾಮ. | ಶ್ರೀ ಕಾಡಜ್ಜಿ ಸಿದ್ದಲಿಂಗಪ್ಪ<br>ಗ್ರಾಮದ ಮುಖಂಡರು,<br>ಕಕ್ಕರಗೊಳ್ಳ ಗ್ರಾಮ |
| ಶ್ರೀ ಕೆ.ವಿ. ಜಯದೇವಪ್ಪ<br>ಕೋಡಿಹಳ್ಳಿ ಗ್ರಾಮದ ಮುಖಂಡರು, | ಶ್ರೀ ಆರ್.ಡಿ. ಕುಲಕರ್ಣಿ<br>ಗ್ರಾಮದ ಮುಖಂಡರು, ಕಕ್ಕರಗೊಳ್ಳ |

ಸರ್ವರಿಗೂ ಸುಸ್ವಾಗತ

ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ, ಆರ್.ಎಲ್. ಕಾನೂನು ಕಾಲೇಜು,
ದಾವಣಗೆರೆ. ಹಾಗೂ
ಕಕ್ಕರಗೊಳ್ಳ ಗ್ರಾಮದ ಗ್ರಾಮಸ್ಥರು

Page4


ಎಸ್. ಎಸ್. ಕೇರ್ ಟ್ರಸ್ಟ್
ಕೌಶಲ್ಯ
Activities:
ಆರ್.ಎಲ್. ಕಾನೂನು ಕಾಲೇಜು
ಯ ಸೇವಾ ಯೋಜನೆ (ಎನ್ಎಸ್ಎಸ್)
NSS Motto : Not Me But You



















## ಡಾ. ಪ್ರಭಾ ಮಲ್ಲಿಕಾರ್ಜುನ್ ಸಲಹೆ | ಅರಿವು ಕಾರ್ಯಕ್ರಮ

# ಕಾನೂನು ನೆರವಿನಿಂದ ಸಮಸ್ಯೆಗೆ ಪರಿಹಾರ



ವಿಜಯವಾಣಿ ಚಿತ್ರ

ದಾವಣಗೆರೆ ತಾಲೂಕು ಕಕ್ಕರಗೊಳ್ಳ ಗ್ರಾಮದಲ್ಲಿ ಗುರುವಾರ ಆಯೋಜಿಸಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮದಲ್ಲಿ ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್, ಕಾನೂನು ಸೇವಾ ಪ್ರಾಧಿಕಾರದ ಸದಸ್ಯಕಾರ್ಯದರ್ಶಿ ಮಹಾವೀರ್ ಎಂ. ಕರಣ್ಣನವರ್, ಡಾ. ಕೆ. ಸಿದ್ದಪ್ಪ, ಡಾ.ಜಿ.ಎಸ್. ಯತೀಶ್, ಕೆ.ಜಿ. ಬಸವನಗೌಡ್ರು, ಕೊಟ್ರಮ್ಮ, ಗುತ್ಯಪ್ಪ ಎಸ್. ಇದ್ದರು.

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಸಮಾಜದಲ್ಲಿ ಸಮಸ್ಯೆಗಳು ಎದುರಾದಾಗ ಕಾನೂನಿನ ನೆರವು ಪಡೆದು ಸೌಹಾರ್ದಯುತವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಸಲಹೆ ನೀಡಿದರು.


ಬಾಪೂಜಿ ವಿದ್ಯಾಸಂಸ್ಥೆಯ ಆರ್.ಎಲ್. ಕಾನೂನು ಕಾಲೇಜು, ಎಸ್.ಎಸ್. ಕೇರ್ ಟ್ರಸ್ಟ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಗ್ರಾಪಂ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಕ್ಕರಗೊಳ್ಳ ಗ್ರಾಮದಲ್ಲಿ ಗುರುವಾರ ಆಯೋಜಿಸಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮದಲ್ಲಿ ಮಾತನಾಡಿದರು. ಶಾಲಾ ಮಕ್ಕಳು, ಪಾಲಕರು ಕಾನೂನಿನ ಅರಿವು ಪಡೆಯಬೇಕು ಎಂದು ತಿಳಿಸಿದ ಅವರು, ರಕ್ತದಾನದ ಮಹತ್ವ, ಉತ್ತಮ ಗುಣಮಟ್ಟದ ಆಹಾರ, ಶಿಕ್ಷಣದ ಮಹತ್ವ ವಿವರಿಸಿದರು. ಕಾನೂನು ಸೇವಾ ಪ್ರಾಧಿಕಾರದ ಸದಸ್ಯಕಾರ್ಯದರ್ಶಿ ಮಹಾವೀರ್ ಎಂ. ಕರಣ್ಣನವರ್ ಮಾತನಾಡಿ, ಉಚಿತ ಕಾನೂನಿನ ನೆರವಿನ ಕುರಿತು ಮಾಹಿತಿ ನೀಡಿದರು.

ವಿಶ್ರಾಂತ ಕುಲಪತಿ ಡಾ. ಕೆ. ಸಿದ್ದಪ್ಪ ಮಾತನಾಡಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ಅರಿವು ಕಾರ್ಯಕ್ರಮಗಳು ಇನ್ನೂ ಹೆಚ್ಚಿನ ರೀತಿ ನಡೆಯಲಿ ಎಂದು ಆಶಿಸಿದರು. ಆರ್.ಎಲ್. ಕಾನೂನು ಕಾಲೇಜಿನ ಪ್ರಾಚಾರ್ಯ ಡಾ.ಜಿ.ಎಸ್. ಯತೀಶ್ ಮಾತನಾಡಿ, ಗ್ರಾಮದ ಮುಖಂಡರಿಗೆ ಕಾನೂನಿನ ಬಗ್ಗೆ ಕನಿಷ್ಠ ತಿಳಿವಳಿಕೆ ಇರಬೇಕು ಎಂದು ತಿಳಿಸಿದರು.

ಗ್ರಾಮದ ಮುಖಂಡ ಕೆ.ಜಿ. ಬಸವನಗೌಡ್ರು ಮಾತನಾಡಿದರು. ಆರ್.ಡಿ. ಕುಲಕರ್ಣಿ, ಗ್ರಾಮದ ಮುಖಂಡರಾದ ವೈ.ಆರ್. ಧನ್ಯಕುಮಾರ್, ಎಂ.ಟಿ. ನಾಗರಾಜ, ಕಾರ್ಯಕ್ರಮದ ಸಂಯೋಜಕ ಟಿ. ವಿದ್ಯಾಧರ ವೇದವರ್ಮ ಇದ್ದರು. ವಿದ್ಯಾರ್ಥಿನಿ ಎಸ್.ಕೆ. ಸುಷ್ಮಾ ಪ್ರಾರ್ಥಿಸಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ್‌ಕುಮಾರ್, ಕಾನೂನು ಅಧಿಕಾರಿ ಮಂಜುನಾಥ ಬಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕೊಟ್ರಮ್ಮ, ಉಪಾಧ್ಯಕ್ಷ ಗುತ್ಯಪ್ಪ ಎಸ್, ಗ್ರಾ.ಪಂ. ಸದಸ್ಯರು, ಗ್ರಾಮಸ್ಥರು ವಿದ್ಯಾರ್ಥಿಗಳು ಇದ್ದರು.

ನಂತರ ಗ್ರಾಮಸ್ಥರು ಕೆಲವೊಂದು ಕಾನೂನು ಸಮಸ್ಯೆಗಳು ಮತ್ತು ಗ್ರಾಮದ ಕುಂದು ಕೊರತೆಗಳ ಬಗ್ಗೆ ಗಣ್ಯರಿಗೆ ಮನವಿ ಸಲ್ಲಿಸಿದರು.



# ಸಮಾಜದ ಸಮಸ್ಯೆಗಳಿಗೆ ಕಾನೂನಿನಲ್ಲಿದೆ ಪರಿಹಾರ



ದಾವಣಗೆರೆ: ಕಾನೂನು ಅರಿವು ಕಾರ್ಯಕ್ರಮದಲ್ಲಿ ಡಾ। ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಸನ್ಮಾನಿಸಲಾಯಿತು.

**ದಾವಣಗೆರೆ:** ಸಮಾಜದಲ್ಲಿನ ಅನೇಕ ಸಮಸ್ಯೆಗಳಿಗೆ ಕಾನೂನು ನೆರವು, ಸೌಹಾರ್ದತೆ ಮೂಲಕ ಸೂಕ್ತ ಪರಿಹಾರ ಕಂಡುಕೊಳ್ಳಬೇಕು ಎಂದು ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿ ಡಾ। ಪ್ರಭಾ ಮಲ್ಲಿಕಾರ್ಜುನ್ ಸಲಹೆ ನೀಡಿದರು.

ಬಾಪೂಜಿ ವಿದ್ಯಾಸಂಸ್ಥೆಯ ಆರ್.ಎಲ್. ಕಾನೂನು ಕಾಲೇಜು, ಎಸ್.ಎಸ್. ಕೇರ್ ಟ್ರಸ್ಟ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಕಕ್ಕರಗೊಳ್ಳ ಗ್ರಾಮ ಪಂಚಾಯತಿ, ಸ್ಥಳೀಯ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಕ್ಕರಗೊಳ್ಳ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಒಂದು ದಿನದ ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕಾನೂನಿನ ಮೂಲಕ ಸೂಕ್ತ ಪರಿಹಾರ ಕಂಡುಕೊಳ್ಳುವಂತಾಗಬೇಕು ಎಂದು ಆಶಿಸಿದರು.

ಶಾಲಾ ಮಕ್ಕಳಿಗೆ ವಿಶೇಷವಾಗಿ ತಂದೆ ತಾಯಿಗಳಿಗೆ ಕಾನೂನಿನ ಬಗ್ಗೆ ಅರಿವು ಬೇಕು. ರಕ್ತದಾನದ ಮಹತ್ವ, ಉತ್ತಮ ಗುಣಮಟ್ಟದ ಆಹಾರದ ಬಗ್ಗೆ ವಿವರಿಸಿ ಜೊತೆಗೆ ಶಿಕ್ಷಣದ ಮಹತ್ವವನ್ನು ತಿಳಿಸಿ ತಂದೆ ತಾಯಿಗಳು ಮಕ್ಕಳಿಗೆ ಶಿಕ್ಷಣ ದೊರೆಯುವಂತೆ ಮಾಡುವ ಜವಾಬ್ದಾರಿ ಇದೆ ಎಂದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ್ ಎಂ. ಕರಣ್ಣನವರ್ ಮಾತನಾಡಿ, ಉಚಿತ ಕಾನೂನಿನ ಅರಿವು ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಹೆಚ್ಚಿನ ಮಟ್ಟದಲ್ಲಿ ಯೋಜನೆ ಮಾಡಿ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ವಿಶ್ರಾಂತ ಉಪ ಕುಲಪತಿ ಪ್ರೊ।ಡಾ। ಕೆ. ಸಿದ್ದಪ್ಪ ಮಾತನಾಡಿ, ಸಾಮಾನ್ಯ ಜನರಿಗೂ ಕೂಡ ಕಾನೂನಿನ ಅರಿವು ಇರಬೇಕು ಎಂದರು.

ಆರ್.ಎಲ್.ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ। ಜೆ.ಎಸ್. ಯತೀಶ್, ವಿದ್ಯಾರ್ಥಿಗಳು ಹೆಚ್ಚಿನ ಮಟ್ಟದಲ್ಲಿ ಕಾನೂನಿನ ಬಗ್ಗೆ ಅಭ್ಯಸಿಸುವಲ್ಲಿ ಯಶಸ್ಸು ಹೊಂದಬೇಕೆಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಕೆ.ಜಿ. ಬಸವನಗೌಡ್ರು ಅಧ್ಯಕ್ಷತೆ ವಹಿಸಿದ್ದರು. ಆರ್ .ಡಿ. ಕುಲಕರ್ಣಿ, ಕೆ.ಜಿ. ಮಹಾಂದಾತಪ್ಪ, ವೈ. ಆರ್.ಧನ್ಯಕುಮಾರ್, ಎಂ.ಟಿ. ನಾಗರಾಜ, ಟಿ. ವಿದ್ಯಾಧರ ವೇದವರ್ಮ ಇತರರು ಇದ್ದರು.

ಎಸ್.ಕೆ. ಸುಷ್ಮಾ ಪ್ರಾರ್ಥಿಸಿದರು. ಸಮಾರೋಪದಲ್ಲಿ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್ ಇತರರು ಪಾಲ್ಗೊಂಡಿದ್ದರು.